**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ161/2019** **ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **14.07.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ 1** ರಿಂದ **4** ನೇ ಪ್ರತಿವಾದಿ ಪರ ಶ್ರೀ **ಪಿ.ಎಸ್** ವಕೀಲರಿಂದಃ

ನಾನು **10** ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ವಕೀಲರು ತಯಾರಿಸಿದ ನಿಪಿ-**6** ನಕ್ಷೆಯನ್ನು ನಾನು ನೋಡಿರುತ್ತೇನೆ. ದಾವಾ-ಎ ಆಸ್ತಿ ಸಾರ್ವಜನಿಕ ರಸ್ತೆಯಾಗಿರುತ್ತದೆ. ಸದರಿ ಆಸ್ತಿ ಸಾರ್ವಜನಿಕ ರಸ್ತೆ ಎಂದು ತೋರಿಸಲು ಪಾಲಿಕೆಯಿಂದ ಅಥವಾ ಪಂಚಾಯತಿಯಿಂದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ-ಎ ಸಾರ್ವಜನಿಕ ರಸ್ತೆ ವಾಸುವಿ ಮಂದಿರದ ಹತ್ತಿರ **4** ಅಡಿ ಕಾಲುದಾರಿ ಇದ್ದು, ಅಲ್ಲಿಂದ ಮುರುಗನ್ ಟಾಕೀಸವರೆಗೆ **12** ಅಡಿ ಅಗಲ ಇರುತ್ತದೆ.

ನಿಪಿ-**4** ಪೋಟೋದಲ್ಲಿರುವ ಹಸಿರು ಮನೆ ರಸ್ತೆಗೆ ಎದುರಾಗಿ ಕಟ್ಟಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ರಸ್ತೆಗೆ ಅಡ್ಡಲಾಗಿ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-**5** ಪೋಟೋದಲ್ಲಿ ಕಾಣುವ ನೀಲಿ ಬಾಗಿಲಿನ ಕಟ್ಟಡ ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಪೋಟೋದಲ್ಲಿ ದೂರದಲ್ಲಿ ಕಾಣುವ ಸಣ್ಣ ಹಸಿರು ಬಣ್ಣದ ಶೌಚಾಲಯ ರತ್ನಮ್ಮ ಮತ್ತು ಬೀಮನಾಯಕರವರಿಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಶೌಚಾಲಯ ರಸ್ತೆಯ ಜಾಗದಲ್ಲಿ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ-ಸಿ ಷೆಡ್ಯೂಲ್ ಆಸ್ತಿಯಲ್ಲಿ ನಾವು ಕಟ್ಟಿರುವಂತಹ ಮನೆ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನಾವು ಮನೆಯನ್ನು ಕಟ್ಟುವ ಮುನ್ನ ಸದರಿ ಜಾಗ ಖಾಲಿ ಜಾಗ ಆಗಿರುತ್ತದೆ. ನಿಪಿ-**4** ಪೋಟೋದಲ್ಲಿರುವ ಗುಡಿಸಲು ನಾವು ಮನೆ ಕಟ್ಟುವ ಮುಂಚೆಯಿಂದಲೇ ಇತ್ತು ಎಂದರೆ ಸರಿ. ನಾವು ಮನೆ ಕಟ್ಟುವ ಮುಂಚೆಯಿಂದಲೂ ಪ್ರತಿವಾದಿಗಳು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಿಪಿ-**4** ಪೋಟೋದಲ್ಲಿರುವ ಗುಡಿಸಲಿನ ಮುಂಭಾಗದಲ್ಲಿ ಮತ್ತು ನಮ್ಮ ಮನೆಯ ಹಿಂಭಾಗದ

ನಡುವೆ ಯಾವುದೇ ಖಾಲಿ ಜಾಗ ಇರುವುದಿಲ್ಲ ಎಂದರೆ ಸಾಕ್ಷಿಯು ನಮಗೆ ಸೇರಿದ ಆಸ್ತಿ ಇದೆ ಎಂದು ನುಡಿಯುತ್ತಾರೆ. ಸದರಿ ಗುಡಿಸಲು ನಾನು ಮದುವೆಯಾಗಿ ಬಂದಾಗಿನಿಂದಲೂ ಅಂದಾಜು ಸುಮಾರು **33** ವರ್ಷಗಳಿಂದಲೂ ಇರುತ್ತದೆ. ಸದರಿ ಗುಡಿಸಲಿಗೆ ಮೇಲ್ಹಾವಣಿಯ ತೆಂಗಿನ ಗರಿಯನ್ನು ಬದಲಾಯಿಸುವುದನ್ನು ಹೊರತುಪಡಿಸಿ ಬೇರೆ ದುರಸ್ತಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿಯವರು ಗುಡಿಸಲಿನ ಮುಂಭಾಗದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು, ಸದರಿ ಪೋಟೋ ಪ್ರತಿವಾದಿಗೆ ಸೇರಿದ ಹಳೆ ಗುಡಿಸಲು ಆಗಿದ್ದು, ಅದನ್ನು ಸಾಕ್ಷಿ ಒಪ್ಪಿದ ಕಾರಣ ಅದನ್ನು ಪ್ರತಿವಾದಿಯವರ ಪರವಾಗಿ **ನಿಡಿ-1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸದರಿ ಪೋಟೋ ಪ್ರತಿವಾದಿಗೆ ಸೇರಿದ ಮನೆಗೆ ಸಂಬಂಧಿಸಿರುತ್ತದೆ ಎಂದು ಸಾಕ್ಷಿ ಒಪ್ಪಿದ್ದು ಅದನ್ನು ಪ್ರತಿವಾದಿಯವಾಗಿ **ನಿಡಿ-2** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ತುಳಸಿ ಕಟ್ಟೆ ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿ. ನಿಡಿ-1 ರ ಪೋಟೋದಲ್ಲಿ ಮುಳ್ಳುತಂತಿ ಬೇಲಿ ಹಾಕಿರುವ ಜಾಗ ನಮಗೆ ಸೇರಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**